sdmimd

**PRAJAVANI**

**Date:** Tuesday, 7st July 2015 **Page No.3**

**Edition:** Mysore **Language: Kannada**

# ಆ.21ರಿಂದ ಸಮ್ಮೇಳನ

ಮೈಸೂರು: ನಗರದ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆ ವತಿಯಿಂದ ಆಗಸ್ಟ್ 21 ಹಾಗೂ 22ರಂದು ನಾಲ್ಕನೇ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನ ಆಯೋಜಿಸಲಾಗಿದೆ.

ಸಮ್ಮೇಳನದಲ್ಲಿ 'ಆರ್ಥಿಕ ಹಾಗೂ ಲೆಕ್ಕಪತ್ರ ವಿಷಯಗಳಲ್ಲಿನ ಉದಯೋನ್ಮುಖ ಪ್ರವೃತ್ತಿಗಳು' ಕುರಿತು ದೇಶ- ವಿದೇಶಗಳ ಸಂಶೋಧಕರು, ಶಿಕ್ಷಣತಜ್ಞರು, ಉದ್ಯಮಿಗಳು ಭಾಗವಹಿಸಿ ಸಂಶೋಧನಾ ಲೇಖನಗಳು ಹಾಗೂ ಕಾಲ್ಪನಿಕ ಸಂದರ್ಭಗಳ ಕುರಿತ ಬರಹಗಳನ್ನು ಪ್ರಸ್ತುತಪಡಿಸಲಿದ್ದಾರೆ.

ಸಮ್ಮೇಳನದಲ್ಲಿ 'ಕಿರುಬಂಡವಾಳ ಕುರಿತ ಶೃಂಗಸಭೆ' ನಡೆಯಲಿದ್ದು, ಫ್ರಾನ್ಸ್‌ನ ಬರ್ಗಂಡಿ ಸ್ಕೂಲ್ ಆಫ್ ಬಿಸಿನೆಸ್‌ನ ಡಾ.ಅಷ್ಟ ಅರವಿಂದ್ ಸೇರಿದಂತೆ ಉನ್ನತದರ್ಜೆಯ ಕಿರುಬಂಡವಾಳ ಸಂಸ್ಥೆಗಳವರು ಭಾಗವಹಿಸಲಿದ್ದಾರೆ. ಆಸಕ್ತರು ಜುಲೈ 30ರ ಒಳಗೆ ಸಮ್ಮೇಳನಕ್ಕೆ ಹೆಸರು ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ: 99861 12019 ಸಂಪರ್ಕಿಸಬಹುದು ಎಂದು ಇನ್‌ಸ್ಟಿಟ್ಯೂಟ್‌ನ ಕಾರ್ಯನಿರ್ವಾಹಕ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಎಂ.ವಿ. ಸುನೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.